ಸ್ವಚ್ಛತೆ ಕಾಪಾಡುವ ಪ್ರತಿಜ್ಞೆ ಸ್ವೀಕಾರ

# ಎನ್‌ಐಟಿಕೆ: ಸುರತ್ಕಲ್‌ನ ಬೀಚ್ ಸ್ವಚ್ಛತೆ ಅಭಿಯಾನ

ಪ್ರಜಾವಾಣಿ ವಾರ್ತೆ

ಮಂಗಳೂರು: ಸ್ವಚ್ಛತೆ ಮತ್ತು ಪರಿಸರ ಸುಸ್ಥಿರತೆಯ ಮಹತ್ವ ಸಾರುವುದಕ್ಕಾಗಿ ಕೇಂದ್ರ ಸರ್ಕಾರ 'ಸ್ವಭಾವ ಸ್ವಚ್ಛತಾ; ಸಂಸ್ಕಾರ ಸ್ವಚ್ಛತಾ' ಎಂಬ ಘೋಷವಾಕ್ಯದೊಂದಿಗೆ ಆರಂಭಿಸಿರುವ 'ಸ್ವಚ್ಛತಾ ಹಿ ಸೇವಾ' ಅಭಿಯಾನದ ಅಂಗವಾಗಿ ಸುರತ್ಕಲ್‌ನ ಎನ್‌ಐಟಿಕೆ ವತಿಯಿಂದ ಸುರತ್ಕಲ್ ಕಡಲ ಕಿನಾರೆಯಲ್ಲಿ ತ್ಯಾಜ್ಯ ಸಂಗ್ರಹ ಭಾನುವಾರ ನಡೆಯಿತು.

ಅಂತರರಾಷ್ಟ್ರೀಯ ಕರಾವಳಿ ಸ್ವಚ್ಛತಾ ದಿನವನ್ನು ಕೂಡ ಇದೇ ಸಂದರ್ಭದಲ್ಲಿ ಆಚರಿಸಲಾಗಿದ್ದು ಎನ್‌ಜಿಒ ಸದಸ್ಯರು, ಎನ್‌ಐಟಿಕೆ ಸೇವಾದಳದ ಕಾರ್ಯಕರ್ತರು, ಎನ್‌ಸಿಸಿ ಕೆಡೆಟ್, ಎನ್‌ಎಸ್‌ಎಸ್ ಸ್ವಯಂಸೇವಕರ ಜೊತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಮನೆಗೆಲಸದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕನ್ನಡ, ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪ್ರತಿಜ್ಞೆ ಸ್ವೀಕರಿಸಿದರು.



ಸುರತ್ಕಲ್‌ನ ಎನ್‌ಐಟಿಕೆ ವತಿಯಿಂದ ಸುರತ್ಕಲ್ ಕಡಲ ಕಿನಾರೆಯಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು

Prajavani, Date:23/09/24, p. no - 04